# ರೋಸೆಲಿನ್ ಆ್ಯಕ್ಟಿಂಗ್ ಟಿಪ್ಸ್



ರೋಜಲಿನ್ ಹರಿಚಂದನ್ ಅಲಿಯಾಸ್ ರೋಸೆಲಿನ್ ಡಿ'ಸೋಜಾ ಅಂದರೆ ಬಾಲಿವುಡ್ ಪ್ರಪಂಚದಲ್ಲಿ ಥಟ್ಟನೆ ಎಲ್ಲರಿಗೂ ಹೊಳೆಯುವ ಹೆಸರೇನಲ್ಲ. ಆದರೆ ಹೊಸ ಕಾಲದ ಅಂತರ್ಜಾಲಪ್ರಿಯರಿಗೆ ಈ ಹೆಸರು ಚಿರಪರಿಚಿತ. ಮುಂಬೈನ ರಂಗಭೂಮಿಯಲ್ಲಿಯೂ ಈ ಹುಡುಗಿ ಹೆಸರು ಆಗೀಗ ಕೇಳಿಬರುತ್ತಿರುತ್ತದೆ. ರೋಸೆಲಿನ್ ಡಿ'ಸೋಜಾ ಅವಳ ಸ್ಟೇಜ್ ನೇಮ್. ಹಾಗಾಗಿ ಆ ಹೆಸರಿನಿಂದಲೇ ಅಭಿಮಾನಿಗಳಿಗೆ ಹತ್ತಿರವಾದವಳು.

ಮ್ಯೂಸಿಕ್ ವಿಡಿಯೊಗಳ ಮೂಲಕ ಆನ್ಲೈನ್ ಅಭಿಮಾನಿಗಳ ದೊಡ್ಡ ಬಳಗವನ್ನೇ ಗಳಿಸಿಕೊಂಡಿರುವ ರೊಸೆಲಿನ್, ಟೀವಿ ಜಾಹೀರಾತುಗಳಲ್ಲಿಯೂ ನಟಿಸಿ ಬಲ್ಲರು. ಟೀ – ಸಿರೀಸ್ ಹೊರತಂದಿರುವ 'ತೂ ಮಿಲೆ' ಮ್ಯೂಸಿಕ್ ವಿಡಿಯೊ ಅವರಿಗೆ ದೊಡ್ಡ ಮಟ್ಟದ ಖ್ಯಾತಿಯನ್ನು ತಂದುಕೊಟ್ಟಿತು. ಮಾಡೆಲಿಂಗ್ ಜಗತ್ತಿನಲ್ಲಿಯೂ ತೊಡಗಿಕೊಂಡಿರುವ ಇವರಿಗೆ ಈ ಜನಪ್ರಿಯತೆ ಸುಲಭವಾಗಿಯೇನೂ ಸಿಕ್ಕಿದ್ದಲ್ಲ.

'ಮುಂದೊಂದು ದಿನ ನನಗೆ ಇಷ್ಟೊಂದು ಜನಪ್ರಿಯತೆ ಸಿಗುತ್ತದೆ ಎಂದು ನಾನಾಗಲಿ, ನನ್ನ ಅಪ್ಪ ಅಮ್ಮನಾಗಲಿ ಖಂಡಿತ ಕನಸಲ್ಲಿಯೂ ಅಂದುಕೊಂಡಿರಲಿಲ್ಲ' ಎಂದು ಖುಷಿಯಿಂದ ಹೇಳಿಕೊಳ್ಳುತ್ತಾರೆ ಅವರು.

ಕೋಲ್ಕತ್ತಾದಲ್ಲಿ ಹುಟ್ಟಿದ ರೋಸಲಿನ್ ತಂದೆಯ ವೃತ್ತಿನಿಮಿತ್ತ ಬೇರೆ ಬೇರೆ ಪ್ರದೇಶಗಳಲ್ಲಿ ಸುತ್ತಾಡುತ್ತಲೇ ಬೆಳೆದರು. ಅಲಹಾಬಾದ್, ಛತ್ತೀಸ್‌ಗಢ, ಗುವಾಹಟಿ, ಒಡಿಸ್ಸಾ ಹೀಗೆ ಹಲವು ಕೆರೆಗಳ ನೀರು ಕುಡಿದು ಸೇರಿದ್ದು ಮುಂಬೈನ ಸಮುದ್ರ ತೀರವನ್ನು.

ಕಾಲೇಜು ದಿನಗಳಿಂದಲೂ ಮಾಡೆಲಿಂಗ್‌ನಲ್ಲಿ ತೊಡಗಿಕೊಂಡಿದ್ದ ಅವರು ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದುಕೊಂಡಿದ್ದಾರೆ. 2015 ರಂದು 'ಮಿಸ್ ಭುವನೇಶ್ವರ್' ಕಿರೀಟವನ್ನು ಮುಡಿಗೇರಿಸಿಕೊಂಡಿದ್ದು ಇವರ ಕನಸಿನ ದಾರಿಯ ಮೊದಲ ಮೈಲಿಗಲ್ಲು. ಅಲ್ಲಿಂದ ಮತ್ತೆ ಹಿಂತಿರುಗಿ ನೋಡಿದ್ದೇ ಇಲ್ಲ. 2018ರಲ್ಲಿ 'ಮಿಸ್ ನಿರ್ವಾಣ' ಎಂಬ ಇನ್ನೊಂದು ಸೌಂದರ್ಯ ಸ್ಪರ್ಧೆಯ ಕಿರೀಟವೂ ಅವರ ಕೈಸೇರಿತು.

ನಟನೆಯ ಎಡೆಗೂ ಒಲವು ಹೊಂದಿದ್ದ ಅವರು ಅದಕ್ಕಾಗಿ ಎಡತಾಕಿದ್ದು ರಂಗಭೂಮಿಗೆ. 'ರಂಗಭೂಮಿ ನನ್ನ ನಟನೆಯ ಕೌಶಲಗಳನ್ನು ರೂಪಿಸಿದೆ. ಅದರಿಂದ ನಾನು ಮತ್ತು ನನ್ನೊಳಗಿನ ನಟಿ ಎರಡೂ ಬೆಳೆದಿದ್ದೇವೆ' ಎಂದು ಕೃತಜ್ಞತೆಯಿಂದ ಹೇಳಿಕೊಳ್ಳುವಷ್ಟು ಅವರು ರಂಗಪ್ರಿಯೆ.

ಸಿನಿಮಾರಂಗಕ್ಕೂ ಅಷ್ಟೇ ಬೇಗ ಅಡಿಯಿಟ್ಟ ರೋಸೆಲಿನ್ ಪಂಜಾಬಿ, ತೆಲುಗು ಸಿನಿಮಾಗಳಲ್ಲಿ ನಟಿಸಿದ್ದಾರೆ. 'ರೂಮ್ – ದ ಮಿಸ್ಟರಿ' ಎಂಬ ಹಿಂದಿ ಸಿನಿಮಾದ ನಾಯಕಿಯಾಗಿಯೂ ಅವರು ನಟಿಸಿದ್ದಾರೆ.

ನಟನೆಯ ಕುರಿತು ಮಾತಿಗೆ ತೊಡಗಿದರೆ ರೋಸೆಲಿನ್ ಮುಖದಲ್ಲಿ ಉತ್ಸಾಹ ಉಕ್ಕುತ್ತದೆ. 'ಒರ್ವ ನಟಿಯಾಗಿ ನಾನು ವೇದಿಕೆಗೆ ಏರುವ ಮುನ್ನ ಸಾಕಷ್ಟು ತಯಾರಿ ಮಾಡಿಕೊಳ್ಳುತ್ತೇನೆ. ತಾಲೀಮು ಮತ್ತು ನಿರಂತರವಾದ ಓದು ಇವೇ ಎರಡು ಸೂತ್ರಗಳು. ನಾನು ತುಂಬ ಓದುತ್ತೇನೆ. ಓದು ನನ್ನ ನಟನೆಗೆ ನೀಡುವ ಕೊಡುಗೆ ತುಂಬ ದೊಡ್ಡದು.

ರಂಗವೇದಿಕೆಯ ಮೇಲೆ ರೀಟೇಕ್ ಎನ್ನುವುದು ಇರುವುದಿಲ್ಲ. ಹಾಗಾಗಿ ಆತ್ಮವಿಶ್ವಾಸ ತುಂಬ ಮುಖ್ಯ. ಆತ್ಮವಿಶ್ವಾಸ ಬರಬೇಕು ಎಂದರೆ ಪೂರ್ವಸಿದ್ಧತೆ ಬೇಕು. ಸಾಮಾನ್ಯ ಜ್ಞಾನ ಮತ್ತು ವೇದಿಕೆಯ ಮೇಲಿನ ಅನಿರೀಕ್ಷಿತ ಸಂಕಷ್ಟಗಳನ್ನು ನಿಭಾಯಿಸುವ ಜಾಣತನ ರಂಗಭೂಮಿಯಲ್ಲಿ ತುಂಬ ಮುಖ್ಯ' ಎಂದು ರೋಸೆಲಿನ್ ನಟನೆಯ ಕುರಿತು ಟಿಪ್ಸ್ ನೀಡುತ್ತಾರೆ.

■ ಮಾಂಟೊ